(1920)’ – ಎಂಬ ಅವರ ಅಭಿಪ್ರಾಯದಲ್ಲಿ ಜಾತಿ ವ್ಯವಸ್ಥೆಯ ಮೂಲರೂಪ ಮತ್ತು ಆನಂತರದ ‘ವಿರೂಪ’ದ ವ್ಯತ್ಯಾಸವನ್ನು ಗಮನಿಸಿದ್ದಾರೆ. ಜಾತಿಪದ್ಧತಿಯ ರೂಪವೇ ‘ವಿರೂಪ’ ಎಂದು ಅವರಿಗೆ ಅನ್ನಿಸಿಲ್ಲ. ಅಷ್ಟೇ ಅಲ್ಲ ಅವರು ‘ನಾಲ್ಕು ವರ್ಣಗಳು ಮಾತ್ರವೇ ಮೌಲಿಕ, ನೈಸರ್ಗಿಕ ಮತ್ತು ಅಗತ್ಯವಾದ ವಿಭಜನೆ ಎಂದು ಪರಿಗಣಿಸುವೆ (1920)’ ಎಂದೂ ಹೇಳುತ್ತಾರೆ. ಮುಂದುವರೆದು ‘ಹಿಂದೂ ಸಮಾಜವು ಜಾತಿಪದ್ಧತಿಯ ಅಸ್ತಿಭಾರದ ಮೇಲೆ ನಿಂತಿರುವುದರಿಂದಲೇ ಅದು ಹೀಗೆ ಗಟ್ಟಿಯಾಗಿರಲು ಸಾಧ್ಯವಾಗಿದೆ (1921–22)’ ಎಂದು ಭಾವಿಸಿದ್ದಾರೆ. ಅಷ್ಟೇ ಅಲ್ಲ ‘ಜಾತಿ ಪದ್ಧತಿಯು ಇಂದಿನ ದುಃಸ್ಥಿತಿಗೆ ಕಾರಣವಲ್ಲ. ನಮ್ಮ ದುರಾಸೆ ಮತ್ತು ದುರಭಿಮಾನಗಳು ನಮ್ಮನ್ನು ಇಂದಿನ ದಾಸ್ಯಕ್ಕೆ ನೂಕಿವೆ’ ಎಂದು ನೈತಿಕ ನಿಲುವನ್ನು ತಳೆಯುತ್ತಾರೆ. ಹಾಗೆ ನೋಡಿದರೆ, ಗಾಂಧೀಜಿಯವರು ಎಲ್ಲಕ್ಕಿಂತ ಹೆಚ್ಚು ಆದ್ಯತೆ ನೀಡಿದ ವಿಚಾರವೆಂದರೆ ನೈತಿಕತೆ. **‘I reject everything that contradicts the fundamental principal of morality'** ಎಂದು ಅವರು ಅತ್ಯಂತ ಸ್ಪಷ್ಟವಾಗಿ ಹೇಳಿದರು. ಈ ನೈತಿಕತೆಯ ಆಧಾರದಲ್ಲೇ ಅವರು ಜಾತಿ ಮತ್ತು ವರ್ಣ ವ್ಯವಸ್ಥೆಯಲ್ಲಿ ಶ್ರೇಷ್ಠ–ಕನಿಷ್ಠ ಎಂಬ ವಿಂಗಡಣೆ ಕಂಡಾಗ ವಿರೋಧಿಸಿದರು. ಈ ಸಾಮಾಜಿಕ ವ್ಯವಸ್ಥೆಯ ಮೂಲ ರೂಪವೇ ಶ್ರೇಷ್ಠ–ಕನಿಷ್ಠ ಅಥವಾ ಮೇಲು–ಕೀಳುಗಳ ಅಡಿಪಾಯವೆಂದು ತಿಳಿಯದಿದ್ದರೂ ಜಾತಿ, ವರ್ಣಗಳ ದುರುಪಯೋಗದಿಂದಾದ ಅಸಮಾನತೆಯನ್ನು ವಿರೋಧಿಸಿದರು, ‘ನನಗೆ ಉತ್ತಮ ಅಥವಾ ಕನಿಷ್ಠ ಎಂಬ ಪ್ರಶ್ನೆಯಿಲ್ಲ. ಬೇರೆ ಜಾತಿಗಳಿಗಿಂತ ತಾನು ಉತ್ತಮನು ಎಂದು ಭಾವಿಸುವ ಬ್ರಾಹ್ಮಣನು ಬ್ರಾಹ್ಮಣನೇ ಅಲ್ಲ. ಬ್ರಾಹ್ಮಣನು ಪ್ರಥಮ ಎನ್ನಿಸಿದ್ದರೆ ಅದು ಆತನು ಸಲ್ಲಿಸಿದ ಸೇವೆಯಿಂದ ಮಾತ್ರ (1925)’ ಎಂಬ ಅಭಿಪ್ರಾಯ ಗಾಂಧಿಯವರದಾಗಿತ್ತು. ‘ವರ್ಣ ವ್ಯವಸ್ಥೆಯ ಕಲ್ಪನೆಯಲ್ಲಿ ಯಾವನೇ ಒಬ್ಬನು ಉಳಿದವರಿಗಿಂತ ಶ್ರೇಷ್ಠನಲ್ಲ. ಒಬ್ಬ ಬ್ರಾಹ್ಮಣನಿಗಿರುವ ಗೌರವ ಪ್ರತಿಷ್ಠೆಗಳು ಒಬ್ಬ ಭಂಗಿಗೂ ಇವೆ (1927)’ ಎಂಬುದು ವರ್ಣಾಶ್ರಮವನ್ನು ಕುರಿತ ಅವರ ತಿಳಿವಳಿಕೆಯಾಗಿತ್ತು.



ಜಾತಿ ಮತ್ತು ವರ್ಣವ್ಯವಸ್ಥೆ ಕುರಿತು ಗ್ರಹಿಕೆಯುಳ್ಳ ಗಾಂಧೀಜಿ ಇದೇ ಕಾಲಮಾನದಲ್ಲಿ ಅಂತರ್‌ಜಾತೀಯ ವಿವಾಹ ಮತ್ತು ಅಂತರ್‌ಜಾತೀಯ ಭೋಜನಗಳನ್ನು ಇಷ್ಟಪಡಲಿಲ್ಲ. ಆದರೆ ಮುಂದೆ ನಿಧಾನವಾಗಿ ಗಾಂಧೀಜಿ ಬದಲಾಗುತ್ತ ಬಂದರು. ‘ಯಾವನೇ ಒಬ್ಬನು ತಾನು ಇನ್ನೊಬ್ಬನಿಗಿಂತ ಮೇಲು ಎಂದು ತಿಳಿದರೆ, ಅವನು ದೇವರಿಗೂ ಮನುಷ್ಯನಿಗೂ ತಪ್ಪಿ ನಡೆದ ಪಾಪಕ್ಕೆ ಗುರಿಯಾಗುತ್ತಾನೆ, ಜಾತಿಯು ಹೀಗೆ ಅಂತಸ್ತಿನ ಅಂತರವನ್ನು ಕಲ್ಪಿಸುವುದಾದರೆ ಅದು ಪಾಪ ವ್ಯವಸ್ಥೆಯೇ ಸರಿ (1931)’ ಎಂದು ಪ್ರತಿಪಾದಿಸಿದರು. 1932ರಲ್ಲಿ ಒಂದು ಕಡೆ ಹೀಗೆ ಬರೆದರು: ‘ಇದೀಗ ವರ್ಣವ್ಯವಸ್ಥೆ ಮುರಿದು ಬಿದ್ದಿದೆ ಎನ್ನುವುದೇ ನನ್ನ ಅಭಿಪ್ರಾಯ. ಈಗ ನಿಜವಾದ ಬ್ರಾಹ್ಮಣ ಅಥವಾ ನಿಜವಾದ ಕ್ಷತ್ರಿಯ ಅಥವಾ ನಿಜವಾದ ವೈಶ್ಯ ಇಲ್ಲ. ನಾವೆಲ್ಲರೂ ಶೂದ್ರರಾಗಿ ಒಂದೇ ವರ್ಣವಾಗಿದ್ದೇವೆ. ಈ (ಶೂದ್ರ) ಸ್ಥಿತಿಯನ್ನು ಒಪ್ಪಿಕೊಂಡರೆ ಎಲ್ಲವೂ ಸುಖಮಯವಾಗುತ್ತದೆ. ಇದು ನಮ್ಮ ಹೆಮ್ಮೆಗೆ ತೃಪ್ತಿ ಕೊಡದಿದ್ದರೆ ನಾವೆಲ್ಲರೂ ಬ್ರಾಹ್ಮಣರೇ ಎಂದುಕೊಳ್ಳಬಹುದು. ಅಸ್ಪೃಶ್ಯತೆಯನ್ನು ತೆಗೆದುಹಾಕುವುದೆಂದರೆ ಉತ್ತಮ–ಕನಿಷ್ಠ ಎಂಬ ಭಾವನೆಯನ್ನು ಬೇರು, ಟೊಂಗೆ ಸಮೇತ ನಿಶ್ಚಯವಾಗಿ ನಾಶ ಮಾಡುವುದೇ ಆಗಿದೆ.’

1915ರಲ್ಲೇ ತಮ್ಮ ಆಶ್ರಮದಲ್ಲಿ ಅಸ್ಪೃಶ್ಯರ ಜೊತೆಗಿನ ಭೋಜನವನ್ನು ಕಡ್ಡಾಯವಾಗಿ ಮಾಡಿದ್ದ ಗಾಂಧಿ, 1921ರಲ್ಲಿ ‘ಅಂತರ್‌ಜಾತಿ ಭೋಜನ ಮತ್ತು ಅಂತರ್‌ಜಾತಿ ವಿವಾಹ ನಿಷೇಧವು ಆತ್ಮದ ಶೀಘ್ರ ಉತ್ಕ್ರಾಂತಿಗೆ ಅಗತ್ಯ. ಆದರೆ ಈ ಸ್ವಯಂ ನಿಷೇಧವು ವರ್ಣಕ್ಕೆ ಅಗತ್ಯ ನಿಯಮವೇನಲ್ಲ’ ಎಂದು ಬಿಟ್ಟರು. 1919ರಲ್ಲಿ ಅಂತರ್‌ಜಾತಿ ಭೋಜನ ಮತ್ತು ವಿವಾಹಗಳು ಪ್ರಜಾಪ್ರಭುತ್ವದ